# ಜನಪದ ರಂಗಭೂಮಿ ಮತ್ತು ಅದರ ಸಾಮಾಜಿಕ ಪ್ರಭಾವ

**ಸುಮಿತ್ರ ಕುಮಾರಿ ಎ.***

**DOI: https://doi.org/10.5281/zenodo.22108385**

**ABSTRACT**

ಜನಪದ ರಂಗಭೂಮಿಯು ಗ್ರಾಮೀಣ ಜನರ ಬದುಕು, ಆಚರಣೆ, ಸಂಪ್ರದಾಯ ಹಾಗೂ ನಂಬಿಕೆಗಳ ಅಭಿವ್ಯಕ್ತಿಯಾಗಿ ರೂಪುಗೊಂಡ ವಿಶಿಷ್ಟ ಕಲಾಮಾಧ್ಯಮವಾಗಿದೆ. ನಿಸರ್ಗದ ಆರಾಧನೆಯಿಂದ ವಿಕಾಸಗೊಂಡು ಯಕ್ಷಗಾನ, ಮೂಡಲಪಾಯ (ದೊಡ್ಡಾಟ), ಪಡುವಲಪಾಯ, ಸಣ್ಣಾಟ ಹಾಗೂ ಗೊಂಬೆಯಾಟಗಳಂತಹ ವೈವಿಧ್ಯಮಯ ಕಲಾಪ್ರಕಾರಗಳಾಗಿ ಇದು ಬೆಳೆದಿದೆ. ಕೇವಲ ಮನರಂಜನೆಯಷ್ಟೇ ಅಲ್ಲದೆ, ಸಾಮಾಜಿಕ, ಧಾರ್ಮಿಕ ಮತ್ತು ನೈತಿಕ ಮೌಲ್ಯಗಳನ್ನು ಜನಸಾಮಾನ್ಯರಿಗೆ ತಲುಪಿಸುವಲ್ಲಿ ಇದು ಪ್ರಮುಖ ಪಾತ್ರ ವಹಿಸುತ್ತದೆ. ಸ್ಥಳೀಯ ಭಾಷೆಯ ಬಳಕೆ, ಸಮುದಾಯಗಳ ಒಗ್ಗೂಡುವಿಕೆ, ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆ ಮತ್ತು ಸಾಮಾಜಿಕ ಜಾಗೃತಿ ಮೂಡಿಸುವಲ್ಲಿ ಇದರ ಕೊಡುಗೆ ಅಪಾರವಾಗಿದೆ. ಆಧುನಿಕ ಮನರಂಜನಾ ಮಾಧ್ಯಮಗಳ ನಡುವೆಯೂ ಜನಪದ ರಂಗಭೂಮಿಯು ಸಾಮಾಜಿಕ ಸಾಮರಸ್ಯ, ಶಿಕ್ಷಣ ಮತ್ತು ಪರಿವರ್ತನೆಯ ಪ್ರಬಲ ಸಾಧನವಾಗಿ ತನ್ನ ಪ್ರಸ್ತುತತೆಯನ್ನು ಉಳಿಸಿಕೊಂಡಿದೆ.

**KEYWORDS:** ಜನಪದ ರಂಗಭೂಮಿ, ಸಾಮಾಜಿಕ ಜಾಗೃತಿ, ಯಕ್ಷಗಾನ ಮತ್ತು ಬಯಲಾಟ, ಸಾಂಸ್ಕೃತಿಕ ಪರಂಪರೆ, ನೈತಿಕ ಮೌಲ್ಯಗಳು.

* **ಸುಮಿತ್ರ ಕುಮಾರಿ ಎ.,** ಸಂಶೋಧನಾರ್ಥಿ, ದ್ರಾವಿಡ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಜನಪದ ರಂಗಭೂಮಿಯು ಜನರ ಜೀವನ, ಸಂಸ್ಕೃತಿ, ಸಂಪ್ರದಾಯ, ಆಚರಣೆ ಮತ್ತು ನಂಬಿಕೆಗಳನ್ನು ಆಧರಿಸಿ ರೂಪುಗೊಂಡ ಸಾಂಪ್ರದಾಯಿಕ ನಾಟಕ ಕಲೆಯಾಗಿದೆ. ಇದು ಗ್ರಾಮೀಣ ಜನರ ಬದುಕಿನೊಂದಿಗೆ ಬೆಸೆದುಕೊಂಡಿರುವ ಕಲಾರೂಪವಾಗಿದ್ದು, ಮನರಂಜನೆಯ ಜೊತೆಗೆ ಸಾಮಾಜಿಕ, ಧಾರ್ಮಿಕ ಹಾಗೂ ನೈತಿಕ ಸಂದೇಶಗಳನ್ನು ಜನರಿಗೆ ತಲುಪಿಸುವ ಪ್ರಮುಖ ಮಾಧ್ಯಮವಾಗಿದೆ. ಜನಪದ ರಂಗಭೂಮಿಯು ತಲೆಮಾರಿನಿಂದ ತಲೆಮಾರಿಗೆ ಮೌಖಿಕ ಪರಂಪರೆಯ ಮೂಲಕ ಬೆಳೆದು ಬಂದಿದೆ. ಯಾವುದೇ ಒಬ್ಬ ವ್ಯಕ್ತಿಯ ಸೃಷ್ಟಿಯಲ್ಲ ಇದು ಸಮುದಾಯದ ಸಾಮೂಹಿಕ ಅನುಭವ ಮತ್ತು ಸೃಜನಶೀಲತೆಯಾಗಿದೆ. ಹಾಡು, ಸಂಗೀತ, ನೃತ್ಯ, ಹಾಸ್ಯ ಮತ್ತು ಅಭಿನಯ ಇವುಗಳ ಸಮನ್ವಯವೇ ಜನಪದ ರಂಗಭೂಮಿಯ ವಿಶೇಷತೆಯಾಗಿದೆ. ಈ ರಂಗಭೂಮಿಯಲ್ಲಿ ಸರಳ ಭಾಷೆಯನ್ನು ಬಳಸುವುದರಿಂದ ಜನಸಾಮಾನ್ಯರಿಗೆ ಸುಲಭವಾಗಿ ಅರ್ಥವಾಗುತ್ತದೆ. ಸಂಭಾಷಣೆಗಳಲ್ಲಿ ಸ್ಥಳೀಯ ಉಪಭಾಷೆಗಳ ಬಳಕೆ ಹೆಚ್ಚಾಗಿದ್ದು, ಇದು ಪ್ರೇಕ್ಷಕರೊಂದಿಗೆ ನೇರ ಸಂಪರ್ಕವನ್ನು ಬೆಳೆಸುತ್ತದೆ. ರಂಗಭೂಮಿಯಲ್ಲಿ ಜನಪದ ರಂಗಭೂಮಿಯೇ ಹೆಚ್ಚು ಪ್ರಾಚೀನವಾದುದು ಅಷ್ಟೇ ಅಲ್ಲದೇ ಎಲ್ಲಾ ಶಿಷ್ಟಕಲೆ ಮತ್ತು ಸಾಹಿತ್ಯಗಳ ಮೂಲ ಜಾನಪದವಾಗಿದೆ. ಈ ಹಿನ್ನೆಲೆಯಲ್ಲಿ ಶಿಷ್ಟ ಎಂದು ಕರೆಯಬಹುದಾದ ವೃತ್ತಿ ಮತ್ತು ಹವ್ಯಾಸಿ ರಂಗಭೂಮಿಯ ಮೂಲವು ಸಹಜವಾಗಿಯೇ ಜನಪದ ರಂಗಭೂಮಿಯಲ್ಲಿ ಕಾಣಿಸಿಗುತ್ತದೆ.

**ಉದ್ದೇಶಗಳು**

- ಜನಪದ ರಂಗಭೂಮಿಯ ಮೂಲಕ ಜನಜೀವನ, ಸಂಸ್ಕೃತಿ, ಸಂಪ್ರದಾಯ ಮತ್ತು ಮೌಲ್ಯಗಳನ್ನು ತಿಳಿದುಕೊಳ್ಳುವುದು.
- ಯಕ್ಷಗಾನ, ಬಯಲಾಟ, ದೊಡ್ಡಾಟ ಮುಂತಾದ ಜನಪದ ರಂಗ ರೂಪಗಳ ವಿಶೇಷತೆಗಳನ್ನು ತಿಳಿದುಕೊಳ್ಳುವುದು.

**ಜನಪದ ರಂಗಭೂಮಿ ಉಗಮ**

ಪ್ರಾಚೀನ ಕಾಲದ ಮನುಷ್ಯ ನಿಸರ್ಗ ಮತ್ತು ಅದರ ವ್ಯಾಪಾರಗಳಾದ ಗುಡುಗು, ಮಿಂಚು, ಮಳೆ, ಕಾಡು, ಕಡಲು, ಕಾಡ್ಗಿಚ್ಚು ಮೊದಲಾದವುಗಳ ಬಗೆಗೆ ಸಹಜವಾಗಿಯೇ ಅಜ್ಞಾನಿಯಾಗಿದ್ದನು. ಈ ಅಜ್ಞಾನವು ತನಗಿಂತ ದೈತ್ಯವಾದ ಈ ನಿಸರ್ಗದ ವ್ಯಾಪಾರಗಳ ಬಗೆಗೆ ಭೀತಿಯನ್ನು ಹುಟ್ಟಿಸಿತು. ಆ ಭೀತಿಯ ಮೂಲದಲ್ಲಿ ಭಯ ಮತ್ತು ಅದರ ಮೂಲದಲ್ಲಿ ದೈವದ ಕಲ್ಪನೆ ಹುಟ್ಟಿ, ಆರಾಧನೆ ಮತ್ತು ಆಚರಣೆ ಹುಟ್ಟಿಕೊಂಡಿತು. ಅವುಗಳಲ್ಲಿ ಭೂತಾರಾಧನೆಯನ್ನು ಆರಾಧನಾತ್ಮಕ ಕಲೆಯಾಗಿ ಕಾಣಿಸಿಕೊಂಡವು. ಆ ಆಚರಣೆಗಳೇ ಕ್ರಮೇಣ ಕಲಾತ್ಮಕ ಆಯಾಮವನ್ನು ಪಡೆದು ಕಲೆಯಾಗಿ ಪರಿವರ್ತನೆಗೊಂಡವು. ಜಗತ್ತಿನ ವಿವಿಧ ಪ್ರದೇಶಗಳ ನಡುವೆ ಅಂದು ಪರಸ್ಪರ ಸಂಪರ್ಕವಿಲ್ಲದಿದ್ದರೂ ಈ ಬಗೆಯ ಆಚರಣೆಗಳು ಮತ್ತು ಕಲೆಗಳು ಎಲ್ಲೆಡೆಯೂ ಘಟಿಸಿವೆ ಎಂದರೆ ಅದಕ್ಕೆ ಮನುಷ್ಯನ ಮೂಲ ಪ್ರವೃತ್ತಿಯೇ ಕಾರಣವಾಗಿದೆ. ಈ ಹಿನ್ನೆಲೆಯಲ್ಲಿ ಅನೇಕ ವಿಚಾರಗಳ ಮಟ್ಟಿಗೆ ಸಾಮ್ಯತೆಯನ್ನು ಪಡೆದ ಸಂಸ್ಕೃತಿ ಮತ್ತು ಅದರ ಭಾಗವಾದ ಆಚರಣಾತ್ಮಕ ಕಲೆಗಳು ಜಗತ್ತಿನಾದ್ಯಂತ ಕಾಣಿಸಿಕೊಂಡಿದೆ.

ಆಚರಣಾತ್ಮಕ ಕಲೆಗಳಲ್ಲಿ ನಾಟಕೀಯತೆಯ ಬೀಜರೂಪವಿದೆ. ಈ ಬೀಜರೂಪವೇ ಮುಂದೆ ವ್ಯವಸ್ಥಿತ ರೀತಿಯಲ್ಲಿ ವಿಕಾಸಗೊಂಡು ನಾಟಕವೆಂಬ ಸ್ವತಂತ್ರ ಕಲೆಯಾಗಿ ಪರಿವರ್ತನೆಗೊಂಡಿದೆ. ಈ ಹಿನ್ನೆಲೆಯಲ್ಲಿ ನಾಟಕಗಳ ಅಥವಾ ಜನಪದ ರಂಗಭೂಮಿಯ

ಮೂಲ ಜನಪದ ನೃತ್ಯಗಳಲ್ಲಿ ಇದೆ ಎಂದಾಯಿತು. ಇದರ ಕಾಲವು ಇವತ್ತಿನ ಭಾಷೆಗಳ ಅವಸ್ಥೆಯನ್ನು ಊಹಿಸಿಕೊಳ್ಳಲೂ ಸಾಧ್ಯವಾಗದಷ್ಟು ಹಿಂದಿನ ಕಾಲವಾಗಿದೆ. ಇದು ಒಟ್ಟು ಜಗತ್ತಿನ ಜನಪದ ರಂಗಭೂಮಿಯ ಮೂಲದ ಬಗೆಗಿನ ಮಾತು. ಇದರಿಂದಾಗಿ ಕರ್ನಾಟಕ ಜನಪದ ರಂಗಭೂಮಿಯ ಉಗಮವಾಗಿದೆ.

**ಕನ್ನಡ ಜನಪದ ರಂಗಭೂಮಿ ಸ್ವರೂಪ**

ಜನಪದ ರಂಗಭೂಮಿಯಾಗಿ ಕನ್ನಡ ನಾಡಿನ ಪರಂಪರೆಯಲ್ಲಿ ಅತ್ಯಂತ ಶ್ರೀಮಂತಿಕೆಯನ್ನು ಹೊಂದಿದೆ. ಯಕ್ಷಗಾನ ಬಯಲಾಟ, ತಾಳಮದ್ದಳೆ, ಗೊಂಬೆಯಾಟ, ಸೋಮನಕುಣಿತ, ವೀರಗಾಸೆ, ಶ್ರೀಕೃಷ್ಣ ಪಾರಿಜಾತ ಮುಂತಾದ ಕಲಾಪ್ರಕಾರಗಳು ಕನ್ನಡ ಜನಪದ ರಂಗಭೂಮಿಯ ವೈವಿಧ್ಯತೆಯಲ್ಲಿ ಕಂಡುಬರುತ್ತದೆ.

ಯಕ್ಷಗಾನ ಬಯಲಾಟ: ಯಕ್ಷಗಾನವು ಕರ್ನಾಟಕ ಅತ್ಯಂತ ಪ್ರಸಿದ್ಧ ಜನಪದ ರಂಗಕಲೆಗಳಲ್ಲಿ ಒಂದಾಗಿದೆ. ಸುಮಾರು 16ನೇ ಶತಮಾನದಿಂದ ಬೆಳವಣಿಗೆಯಾಗಿ ಕರಾವಳಿ ಹಾಗೂ ಮಲೆನಾಡು ಪ್ರದೇಶಗಳಲ್ಲಿ ಪ್ರಸಿದ್ಧವಾಗಿದೆ. ಇದು ಪುರಾಣ ಮತ್ತು ಮಹಾಕಾವ್ಯ ಕಥೆಗಳನ್ನೊಳಗೊಂಡಿದೆ. ಸಂಗೀತ, ನೃತ್ಯ, ಅಭಿನಯ ಮತ್ತು ಸಂಭಾಷಣೆಯ ಸಮನ್ವಯವಿರುತ್ತದೆ. ತೆರೆದ ರಂಗಮಂದಿರ ಹೊಂದಿದ್ದು, ಹಳ್ಳಿಯ ಬಯಲಿನಲ್ಲಿ ರಾತ್ರಿಯಿಡೀ ನಡೆಸಲಾಗುತ್ತದೆ. ಭಾಗವತರ ಹಾಡುಗಾರಿಕೆ ಹಾಗೂ ಚಂಡೆ ಮದ್ದಳೆಯ ಗಡಸು ನಾದವು ಯಕ್ಷಗಾನ ಬಯಲಾಟದಲ್ಲಿ ಆಕರ್ಷಣೆಯಾಗಿದೆ. ಇದನ್ನು ಮೂಡಲಪಾಯ ಮತ್ತು ಪಡುವಲ ಪಾಯ ಎಂದು ಎರಡು ಭಾಗವಾಗಿ ಮಾಡಲಾಗಿದೆ.

ಮೂಡಲಪಾಯ ಅಥವಾ ದೊಡ್ಡಾಟ: ಕನ್ನಡ ಜನಪದ ರಂಗಭೂಮಿ ಪರಂಪರೆಯಲ್ಲಿ ಅತ್ಯಂತ ವಿಶಿಷ್ಟ ದೃಶ್ಯ ಕಲಾ ಪ್ರಕಾರದಲ್ಲಿ ಮೂಡಲಪಾಯವು ಒಂದಾಗಿದೆ. ಕರ್ನಾಟಕದ ಬಯಲು ಸೀಮೆಯಲ್ಲಿ ಕಾಣುತ್ತೇವೆ. ಇದನ್ನು ದೊಡ್ಡಾಟವೆಂದು ಕರೆಯುತ್ತಾರೆ. ಹೆಸರೇ ಹೇಳುವಂತೆ ಇದರ ಪ್ರದರ್ಶನಕ್ಕೆ ಹೆಚ್ಚು ಸಮಯ ಬೇಕಾಗುತ್ತದೆ. ಇದು ಪಡುವಲಪಾಯದ ಯಕ್ಷಗಾನಕ್ಕಿಂತ ಹೆಚ್ಚು ಪ್ರಾಚೀನವಾದ ಕಲೆ ಎಂದು ಹೇಳಲಾಗುತ್ತದೆ. ಮೂಡಲಪಾಯ ಇಂದಿಗೂ ಹೆಚ್ಚು ಜಾನಪದೀಯವಾಗಿಯೇ ಉಳಿದು ಬಂದಿದೆ. ಪ್ರಾದೇಶಿಕ ಭಿನ್ನತೆಯ ಮೂಲದಲ್ಲಿ ಕಾಣಿಸಿಕೊಂಡ ದೊಡ್ಡಾಟವು ಸಂಗೀತ ಪ್ರಧಾನ ಕಲೆಯಾಗಿದೆ. ಇದರ ವಸ್ತು ಪುರಾಣ ಕೇಂದ್ರಿತವಾಗಿದೆ. ಇದರಲ್ಲಿ ಭಾಗವತರ ಪಾತ್ರ ಮುಖ್ಯವಾದುದು. ಇವರು ಪ್ರಸಂಗಕ್ಕೆ ತಕ್ಕ ಪಾತ್ರಧಾರಿಗಳನ್ನು ಆಯ್ಕೆ ಮಾಡಿದ ಮೇಲೆ ಕಲಿಯಬೇಕಾಗಿರುವ ಪ್ರಸಂಗದ ಪ್ರತಿಗೆ ಮೊದಲ ಪೂಜೆ ಸಲ್ಲುತ್ತದೆ. ಪಾತ್ರಗಳ ಹಂಚಿಕೆಯಾದ ಮೇಲೆ ದಿನನಿತ್ಯ ಸಂಜೆಯಿಂದ ರಾತ್ರಿಯವರೆಗೆ ನಿರಂತರ ಅಭ್ಯಾಸ ನಡೆಯುತ್ತಿತ್ತು. ಸಾಮಾನ್ಯವಾಗಿ ಊರ ಮುಂದಿನ ಗ್ರಾಮದೇವತೆ ಗುಡಿಯ ಮುಂದಿರುವ ಬಯಲೇ ಪ್ರದರ್ಶನದ ವೇದಿಕೆಯಾಗಿತ್ತು. ಪ್ರದರ್ಶನಕ್ಕೆ ಊರ ಹಿರಿಯರು ಮುಹೂರ್ತ ನೋಡಿ ಕಂಭ ಸ್ಥಾಪನೆ ಮಾಡುತ್ತಿದ್ದರು. ತೆಂಗಿನ ಗರಿ ಹೆಣೆದು ಚಪ್ಪರ ಹಾಕುತ್ತಾರೆ. ಅದರ ಮೇಲೆ ಹೊಂಗೆಸೊಪ್ಪು ಹರಡಿದ್ದರು. ತಲಭಾಗಕ್ಕೆ ಹಲಗೆ ಹಾಸಿ ಅಟ್ಟವನ್ನು ನಿರ್ಮಿಸುತ್ತಾರೆ, ಇದು ಬಯಲು ರಂಗ ಮಂದಿರವಾಗಿರುತ್ತದೆ.

ಮೂಡಲಪಾಯ ಯಕ್ಷಗಾನದ ಬಣ್ಣಗಾರಿಕೆಯು ಕರಾವಳಿ ಯಕ್ಷಗಾನದ ಅಲಂಕರಣ ಕ್ರಿಯೆಯಷ್ಟು ಶಾಸ್ತ್ರೀಯವಾದುದಾಗಲಿ, ನಾಜೂಕಿನಿಂದ ಕೂಡಿದ್ದಾಗಲಿ ಅಲ್ಲ, ರಾಜ ಪಾತ್ರಗಳಿಗೆ ಅರದಳವನ್ನು, ಘೋರ ಪಾತ್ರಗಳಿಗೆ ಕೆಂಪು, ಹಸಿರು, ಕಪ್ಪು ಮುಂತಾದ

ಕಟುವಾದ ಬಣ್ಣಗಳನ್ನು ಬಳಸುತ್ತಿದ್ದರು. ವೇಷಭೂಷಣಗಳು ಅತ್ಯಂತ ಶ್ರೀಮಂತವಾದವುಗಳು ಪ್ರತಿಯೊಂದರಲ್ಲಿಯೂ ವೈವಿಧ್ಯತೆಯಿದ್ದು ಸೌಂದರ್ಯದಿಂದ ಕೂಡಿರುತ್ತದೆ. ಪ್ರಧಾನವಾಗಿ ಕಿರೀಟ, ಭುಜಕೀರ್ತಿ, ಎದೆಹಾರ, ನಡುಪಟ್ಟಿ, ವೀರಗಾಸೆ. ಈ ಪ್ರಧಾನ ಅಂಗಗಳೊಂದಿಗೆ ಕೈಕಟ್ಟು, ಕಾಲುಗೆಜ್ಜೆ ಕಡಗಗಳು ಸೇರಿರುತ್ತವೆ. ಅಲಂಕಾರ, ಹಾಡು, ಬಣ್ಣ, ವೇಷಭೂಷಣ ಜೊತೆಗೂಡಿ ಕಲೆಯಾಗಿ ಪರಿಣಮಿಸಿತು. ಕ್ರಮೇಣ ವೈವಿಧ್ಯತೆಯನ್ನು ಪಡೆದುಕೊಂಡು ಪ್ರದರ್ಶನಗೊಳ್ಳಲಾರಂಭಿಸಿತು. ಇದರಲ್ಲಿ ದೊಡ್ಡಾಟವು ಅನೇಕ ವಿಚಾರಗಳಲ್ಲಿ ಬೇರೆಯಾಗಿ ಉಳಿದು ಬೆಳೆದು ಇಂದಿಗೂ ತನ್ನ ಪರಂಪರೆಯನ್ನು ಉಳಿಸಿಕೊಂಡು ಬಂದಿದೆ.

**ಪಡುವಲಪಾಯ:**

ಈ ಪರಂಪರೆಯನ್ನು ಮಲೆಸೀಮೆಯಾದ ದಕ್ಷಿಣಕನ್ನಡ, ಉತ್ತರಕನ್ನಡ ಚಿಕ್ಕಮಂಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಕಾಣಸಿಗುತ್ತದೆ. ಇದನ್ನು ಪೂರ್ಣವಾಗಿ ಜನಪದ ಕಲೆ ಎಂದು ಹೇಳಲು ಸಾಧ್ಯವಿಲ್ಲ. ಇದರಲ್ಲಿ ಕತೆ, ಪ್ರಸಾಧನ, ರಂಗಸಜ್ಜಿಕೆ ಮೊದಲಾದ ಅನೇಕ ವಿಚಾರಗಳಲ್ಲಿ ಜಾನಪದೀಯ ಧಾರೆ ಇದ್ದಾಗಲೂ ಅವುಗಳೊಂದಿಗೆ ಜೋಡಣೆಗೊಂಡಿರುವ ಹಾಡುಗಳು ಮತ್ತು ಕೆಲವೊಮ್ಮೆ ಕೆಲವು ಕತೆಗಳು ಸಹ ಕವಿಯಿಂದ ನಿರ್ಮಿಸಲ್ಪಟ್ಟಿದೆ. ಆದ್ದರಿಂದ ಇದನ್ನು ಮಾರ್ಗಕಲೆಯೆಂದು ಕರೆಯಬಹುದು. ಆದರೆ ಇದಕ್ಕಿರುವ ಜಾನಪದೀಯ ಆಯಾಮಗಳನ್ನು ಗುರುತಿಸುತ್ತಾ ಇದನ್ನು ಜನಪದ ರಂಗಭೂಮಿಯಲ್ಲಿ ಇಟ್ಟು ನೋಡಬಹುದಾಗಿದೆ. ಪಡುವಲಪಾಯವು ಹೆಚ್ಚು ಶಿಷ್ಟ ಕವಿಗಳ ಪ್ರಯತ್ನದಿಂದ ಬೆಳೆದು ಬಂದ ಕಲೆ ಪ್ರಾದೇಶಿಕ ಹಿನ್ನೆಲೆಯ ಪ್ರತ್ಯೇಕ ಸಂಪ್ರದಾಯಗಳಲ್ಲಿ ಗುರುತಿಸಿಕೊಂಡಿದೆ. ತೆಂಕುತಿಟ್ಟು ಮತ್ತು ಬಡಗುತಿಟ್ಟು ಎಂದು ಕರೆಯಲಾಗಿದೆ. ತೆಂಕುತಿಟ್ಟನ್ನು ಉಡುಪಿಯ ದಕ್ಷಿಣಕ್ಕಿರುವ ಕನ್ನಡ ಜಿಲ್ಲೆಯಲ್ಲಿ ಕಂಡರೆ, ಬಡಗು ತಿಟ್ಟನ್ನು ಉತ್ತರಕ್ಕಿರುವ ಜಿಲ್ಲೆಗಳಲ್ಲಿ ಕಾಣಬಹುದಾಗಿದೆ. ಇವುಗಳಲ್ಲಿ ಮೂಲ ವ್ಯತ್ಯಾಸಗಳು ಕಂಡುಬರುವುದಿಲ್ಲ. ತೆಂಕುತಿಟ್ಟು ಕೇರಳದ ಕಥಕ್ಕಳಿಯ ಪ್ರಭಾವಕ್ಕೆ ಒಳಗಾದರೆ, ಬಡಗು ತಿಟ್ಟಿನಲ್ಲಿ, ತಾಳ ಬದಲಾಗಿ ಜಾಗಟೆ ಬಾರಿಸುವುದಾಗಿದೆ. ಇವುಗಳ ಕಥಾವಸ್ತು ರಾಮಾಯಣ, ಮಹಾಭಾರತದಂತ ಪೌರಾಣಿಕ ಕತೆಗಳಾಗಿರುತ್ತವೆ. ಇದರಲ್ಲಿ ಪಾರಂಪರಿಕವಲ್ಲದ ವಸ್ತು ವೈವಿಧ್ಯಕ್ಕೆ ಮಹತ್ವ ನೀಡಲಾಗುವುದಿಲ್ಲ.

**ಯಕ್ಷಗಾನ ಗೊಂಬೆಯಾಟ**

ಯಕ್ಷಗಾನ ಗೊಂಬೆಯಾಟ ಕರ್ನಾಟಕ ಕರಾವಳಿ ಭಾಗದ ಪ್ರಸಿದ್ಧ ಸಾಂಪ್ರದಾಯಿಕ ತಂತಿ ಗೊಂಬೆಯಾಟವಾಗಿದೆ. ಇದು ಯಕ್ಷಗಾನ ನೃತ್ಯ ನಾಟಕ ಶೈಲಿಯನ್ನು ಹೋಲುತ್ತದೆ. ಹಾಗೂ ಕರಾವಳಿಯ ಶ್ರೀಮಂತ ಕಲೆ ಮತ್ತು ಸಂಸ್ಕೃತಿಯನ್ನು ಬಿಂಬಿಸುತ್ತದೆ. ಸಾಂಪ್ರದಾಯಿಕ ಯಕ್ಷಗಾನದಂತೆ ಹಾಡು ಸಂಗೀತ ತಾಳ ಮತ್ತು ನೃತ್ಯದ ಸನ್ನೆಗಳನ್ನು ಒಳಗೊಂಡಿರುತ್ತದೆ.

**ತೊಗಲು ಗೊಂಬೆಯಾಟ**

ತೊಗಲು ಗೊಂಬೆಯಾಟವು ಕರ್ನಾಟಕದ ಅತ್ಯಂತ ಪ್ರಾಚೀನ ಜಾನಪದ ಮತ್ತು ನೆರಳಿನ ಬೊಂಬೆಯಾಟದ ಕಲೆಯಾಗಿದೆ. ಇದನ್ನು ಪ್ರಾಣಿಯ ಚರ್ಮದಿಂದ ತಯಾರಿಸಿದ ವರ್ಣರಂಜಿತ ಗೊಂಬೆಗಳನ್ನು ಬಳಸಿ ಬಿಳಿ ಪರದೆಯ ಹಿಂದೆ ದೀಪದ ಬೆಳಕಿನಲ್ಲಿ ಪ್ರದರ್ಶಿಸಲಾಗುತ್ತದೆ. ಕಿಲ್ಲೇಕ್ಯಾತ ಜನಾಂಗದವರು ಪ್ರದರ್ಶನ ಮಾಡುತ್ತಾರೆ. ರಾಮಾಯಣ, ಮಹಾಭಾರತ ಪೌರಾಣಿಕ ಕಥೆಗಳನ್ನು ಈ ಆಟದ ಮೂಲಕ ನಿರೂಪಿಸಲಾಗುತ್ತದೆ. ಹೆಸರೇ ಹೇಳುವಂತೆ ಜಿಂಕೆ, ಮೇಕೆ, ಆಡಿನ ಚರ್ಮವನ್ನು ಹದಗೊಳಿಸಿ ಬೊಂಬೆಗಳನ್ನು

ತಯಾರಿಸುತ್ತಾರೆ.

**ಸಣ್ಣಾಟ**

ದೊಡ್ಡಾಟದ ಕೂಸು ಸಣ್ಣಾಟವಾಗಿದೆ. ಅನೇಕ ವಿಚಾರಗಳಲ್ಲಿ ಈ ಎರಡಕ್ಕೂ ಸಾಮ್ಯವಿದೆ. ಆದರೆ ಇದರ ಹೆಸರೇ ಹೇಳುವಂತೆ ಇದು ಸಣ್ಣಾಟ. ಇದರ ಪ್ರದರ್ಶನಕ್ಕೆ ದೊಡ್ಡಾಟಕ್ಕೆ ಬೇಕಾದಷ್ಟು ಸಮಯವಾಗಲೀ ರಂಗಸಜ್ಜಿಕೆಯಾಗಲಿ ಬೇಕಾಗಿಲ್ಲ. ಉತ್ತರ ಕರ್ನಾಟಕದಲ್ಲಿ ಪ್ರಧಾನವಾಗಿ ಕಂಡುಬರುತ್ತದೆ. ವಸ್ತು ವೈವಿಧ್ಯತೆಯನ್ನು ಹೊಂದಿದ ರಂಗಭೂಮಿಯಾದ್ದರಿಂದ ಪುರಾಣ ಚರಿತ್ರೆ ಮತ್ತು ಲೌಕಿಕ ಸಮಾಜದ ವಸ್ತುಗಳನ್ನು ಪ್ರದರ್ಶಿಸಲಾಗುತ್ತದೆ. ಸಣ್ಣಾಟವನ್ನು ಉತ್ತರ ಕರ್ನಾಟಕದಲ್ಲಿ ಶರಣರಾಟ ಮತ್ತು ದಾಸರಾಟ ಎಂದು ಎರಡು ಭಾಗವಾಗಿ ಮಾಡಲಾಗಿದೆ. ಶರಣರಾಟದಲ್ಲಿ ವಿಶೇಷವಾಗಿ ಕರ್ನಾಟಕದ ಶೈವ– ವೀರಶೈವ ಭಕ್ತ ವಚನಕಾರ ಕಥನಗಳನ್ನು ಹೇಳಿದರೆ, ದಾಸರಾಟದಲ್ಲಿ ಕೃಷ್ಣ, ವಿಷ್ಣುಭಕ್ತರು ಮೊದಲಾದ ಕಥನಗಳನ್ನು ಹೇಳುತ್ತದೆ. ಉಳಿದಂತೆ ಸಾಮಾಜಿಕ ಮತ್ತು ಚರಿತ್ರೆ ಮೂಲದ ವಸ್ತುವನ್ನಿರಿಸಿಕೊಂಡು ನಾಟಕಗಳನ್ನು ಪ್ರತ್ಯೇಕವಾಗಿ ಗುರುತಿಸಲಾಗುತ್ತದೆ.

**ಜನಪದ ರಂಗಭೂಮಿಯಲ್ಲಿ ಸಾಮಾಜಿಕ ಪ್ರಭಾವ**

ಜನಪದ ರಂಗಭೂಮಿ ಸಂಸ್ಕೃತಿಯ ಜೀವನಾಡಿಯಾಗಿದ್ದು, ಜನರ ಬದುಕು, ನಂಬಿಕೆ, ಆಚರಣೆ ಸಂಪ್ರದಾಯ ಹಾಗೂ ಸಾಮಾಜಿಕ ಮೌಲ್ಯಗಳನ್ನು ಪ್ರತಿಬಿಂಬಿಸುವ ಕಲಾರೂಪವಾಗಿದೆ. ಸಮಾಜದ ಸಮಸ್ಯೆಯನ್ನು ಜನರ ಮುಂದೆ ತೆರೆದಿಡುವ, ಜಾಗೃತಿ ಮೂಡಿಸುವ ಮತ್ತು ಸಾಮಾಜಿಕ ಪರಿವರ್ತನೆ ಮಾಡುವ ಪರಿಣಾಮಕಾರಿ ಮಾಧ್ಯಮವಾಗಿದೆ. ಜನಪದ ರಂಗರೂಪಗಳು ಗ್ರಾಮೀಣ ಸಮಾಜದೊಂದಿಗೆ ನಿಕಟ ಸಂಬಂಧ ಹೊಂದಿದೆ. ಇವು ಜನರ ಜೀವನಾನುಭವಗಳನ್ನು ಕಲಾತ್ಮಕವಾಗಿ ಅಭಿವ್ಯಕ್ತಿಸುತ್ತವೆ.

**ಸಮಾಜಮುಖಿ:** ಸಮಾಜದಿಂದಲೇ ಹುಟ್ಟಿ ಸಮಾಜಕ್ಕಾಗಿಯೇ ಬೆಳೆಯುವ ಕಲೆಯಾಗಿದೆ. ಜನರ ಭಾಷೆ, ಧಾರ್ಮಿಕ ನಂಬಿಕೆ, ಕೃಷಿ ಜೀವನ, ಹಬ್ಬ ಹರಿದಿನಗಳು, ಕುಟುಂಬ ವ್ಯವಸ್ಥೆ ಹಾಗೂ ಸಮುದಾಯಗಳ ಜೀವನಶೈಲಿಯನ್ನು ನೈಜವಾಗಿ ಬಿಂಬಿಸುತ್ತದೆ. ಹೀಗಾಗಿ ಜನಪದ ರಂಗಭೂಮಿ ಸಮಾಜದ ಕನ್ನಡಿಯಾಗಿದೆ.

**ನೈತಿಕ ಮತ್ತು ಮಾನವೀಯ ಮೌಲ್ಯ:** ಜನಪದ ಕಥೆಗಳು, ಪುರಾಣಗಳು ಮತ್ತು ಇತಿಹಾಸದ ಪ್ರಸಂಗಗಳ ಮೂಲಕ ಸತ್ಯ, ಧರ್ಮ, ನ್ಯಾಯ, ಪ್ರಾಮಾಣಿಕತೆ, ತ್ಯಾಗ, ದಯೆ, ಸಹಾನುಭೂತಿ ಹಾಗೂ ಮಾನವೀಯ ಮೌಲ್ಯಗಳನ್ನು ಜನರಲ್ಲಿ ಬೆಳೆಸಲಾಗುತ್ತದೆ. ಇದರಿಂದ ಸಮಾಜದಲ್ಲಿ ಉತ್ತಮ ವ್ಯಕ್ತಿತ್ವ ನಿರ್ಮಾಣವಾಗುತ್ತದೆ.

**ಸಂಸ್ಕೃತಿ ಮತ್ತು ಪರಂಪರೆ:** ಆಚರಣೆ, ವೇಷಭೂಷಣ, ಸಂಗೀತ, ನೃತ್ಯ ಹಾಗೂ ಸಂಪ್ರದಾಯವನ್ನು ತಲೆಮಾರಿನಿಂದ ತಲೆಮಾರಿಗೆ ತಲುಪಿಸಿ ಉಳಿಸಿ ಬೆಳೆಸುವ ಮಹತ್ವದ ಕಾರ್ಯವನ್ನು ಮಾಡುತ್ತದೆ.

**ಸಾಮಾಜಿಕ ಏಕತೆ ಮತ್ತು ಸಾಮರಸ್ಯ:** ಜನಪದ ರಂಗಭೂಮಿಯು ಗ್ರಾಮೀಣ ಪ್ರದೇಶದ ಎಲ್ಲಾ ಸಮುದಾಯದ ಜನರನ್ನು ಒಂದೇ ವೇದಿಕೆಯಲ್ಲಿ ಸೇರಿಸುತ್ತವೆ. ಇದರಿಂದ ಪರಸ್ಪರ ಸಹಕಾರ, ಸಹೋದರತ್ವ, ಸಹಬಾಳ್ವೆ ಮತ್ತು ಏಕತೆಯ ಮನೋಭಾವನೆಯನ್ನು ಜನರಲ್ಲಿ ಮೂಡಿಸುತ್ತದೆ.

**ಜನಭಾಷೆಯ ಬೆಳವಣಿಗೆ:** ಸ್ಥಳೀಯ ಮತ್ತು ಉಪಭಾಷೆಗಳ ಬಳಕೆ ಹೆಚ್ಚಿರುವುದರಿಂದ

ಭಾಷೆಯನ್ನು ಬೆಳೆಸಲು ಮತ್ತು ಸಂರಕ್ಷಿಸಲು ಸಹಾಯವಾಗುತ್ತದೆ.

**ಶೈಕ್ಷಣಿಕ ಮಹತ್ವ ಮತ್ತು ಸಾಮಾಜಿಕ ಜಾಗೃತಿ:** ಶಿಕ್ಷಣವಿಲ್ಲದ ಜನರಿಗೆ ಸುಲಭವಾಗಿ ಅರ್ಥವಾಗುವ ರೀತಿಯಲ್ಲಿ ಪುರಾಣ ಕತೆ, ಆರೋಗ್ಯ, ಸ್ವಚ್ಛತೆ, ಪರಿಸರ ಮತದಾನ, ಮಹಿಳಾ ಸಬಲೀಕರಣ ಮೂಢನಂಬಿಕೆ ಅಸ್ಪೃಶ್ಯತೆ ಮುಂತಾದ ವಿಷಯಗಳ ಬಗ್ಗೆ ಪರಿಣಾಮಕಾರಿಯಾಗಿ ತಿಳಿಸಲು ರಂಗಭೂಮಿ ಸಹಾಯ ಮಾಡುತ್ತದೆ.

**ಕಲಾವಿದರಿಗೆ ಪ್ರೋತ್ಸಾಹ:** ಜನಪದ ಕಲಾವಿದರ ಪ್ರತಿಭೆಗೆ ವೇದಿಕೆ ಒದಗಿಸುವುದರ ಜೊತೆಗೆ ಅವರ ಜೀವನೋಪಾಯಕ್ಕೆ ಸಹಕಾರಿಯಾಗುತ್ತದೆ, ಇದರಿಂದ ಕಲೆಗಳು ನಿರಂತರವಾಗಿ ಬೆಳೆದು ಜೀವಂತವಾಗಿರುತ್ತವೆ. ಹಿಂದಿನ ಕಾಲದಲ್ಲಿ ಜನರು ದುಡಿಮೆಯ ಆಯಾಸವನ್ನು ನಿವಾರಿಸಿಕೊಳ್ಳಲು ಮತ್ತು ಸಂತೋಷಕ್ಕಾಗಿ ಯಾವುದೇ ಸಂಭಾವನೆ ಇಲ್ಲದೆ ಕಲಾವಿದರಾಗಿ ಪ್ರದರ್ಶನವನ್ನು ನೀಡುತ್ತಿದ್ದರು. ಪ್ರಸ್ತುತ ಉದ್ಯೋಗಕ್ಕಾಗಿ ಕಲಾವಿದನಾಗಿ ಬದುಕನ್ನು ಕಟ್ಟಿಕೊಳ್ಳುತ್ತಾರೆ.

**ಉಪಸಂಹಾರ**

ಒಟ್ಟಿನಲ್ಲಿ ಜನಪದ ರಂಗಭೂಮಿ ಸಂಸ್ಕೃತಿಯ ಅಮೂಲ್ಯ ಪರಂಪರೆಯಾಗಿದೆ. ಇದು ಜನಜೀವನದ ಪ್ರತಿಬಿಂಬವಾಗಿದ್ದು ಮನರಂಜನೆಯೊಂದಿಗೆ ಶಿಕ್ಷಣ ಮತ್ತು ಸಂಸ್ಕಾರವನ್ನು ನೀಡುವ ಮಾಧ್ಯಮವಾಗಿದೆ. ಆಧುನಿಕ ಯುಗದಲ್ಲಿ ಹೊಸ ಮನರಂಜನಾ ಮಾಧ್ಯಮಗಳ ಪ್ರಭಾವ ಹೆಚ್ಚಾದರೂ, ಜನಪದ ರಂಗಭೂಮಿಯು ತನ್ನ ಸಾಂಸ್ಕೃತಿಕ ವೈಶಿಷ್ಟ್ಯವನ್ನುಳಿಸಿಕೊಂಡು ಬಂದಿದೆ. ಜನಪದ ರಂಗಭೂಮಿ ಸಮಾಜದ ಕನ್ನಡಿ ಮಾತ್ರವಲ್ಲ, ಸಮಾಜ ಪರಿವರ್ತನೆಯ ಪ್ರಬಲ ಸಾಧನವೂ ಆಗಿದೆ. ಜನರಿಗೆ ಮನರಂಜನೆಯ ಜೊತೆಗೆ ಜ್ಞಾನ, ಸಂಸ್ಕೃತಿ, ನೈತಿಕತೆಯನ್ನು ಬೆಳೆಸುವ ಮಹತ್ವದ ಮಾಧ್ಯಮವಾಗಿದೆ. ಇದು ಜನರ ಜೀವನಾನುಭವಗಳನ್ನು ಕಲಾತ್ಮಕವಾಗಿ ಅಭಿವ್ಯಕ್ತಿಸುವುದರೊಂದಿಗೆ ಸಾಮಾಜಿಕ ಸಮಸ್ಯೆಗಳ ಕುರಿತು ಜನರಲ್ಲಿ ಅರಿವನ್ನು ಮೂಡಿಸುತ್ತದೆ.

**ಪರಾಮರ್ಶನ ಗ್ರಂಥಗಳು:**


1. ಶ್ರೀನಿವಾಸಮೂರ್ತಿ ಕಾ. ವೆಂ., (2005), ಕನ್ನಡ ರಂಗಭೂಮಿ, ಬೆಂಗಳೂರು: ಪುಸ್ತಕ ಮಂಟಪ.
2. ಅಕ್ಷರ ಕೆ. ವಿ., (1994), ರಂಗ ಪ್ರಪಂಚ, ಹೆಗ್ಗೋಡು (ಸಾಗರ): ಅಕ್ಷರ ಪ್ರಕಾಶನ.
3. ರಂಗನಾಥ್ ಎಚ್. ಕೆ., (1972), ಕರ್ನಾಟಕ ರಂಗಭೂಮಿ, ಮೈಸೂರು: ಸುರುಚಿ ಪ್ರಕಾಶನ.
4. ಪುಟ್ಟಸ್ವಾಮಯ್ಯ ಬಿ., (1983), ಕನ್ನಡ ರಂಗಭೂಮಿ ನಡೆದು ಬಂದ ದಾರಿ, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
5. ಆದ್ಯ ರಂಗಾಚಾರ್ಯ, (1971), ರಂಗ ನಾಟಕಶಾಸ್ತ್ರ, ಮೈಸೂರು: ಮೈಸೂರು ವಿಶ್ವವಿದ್ಯಾಲಯ.